# 3

# ಯೇಸುವಿನ ಕುರಿತು ನಾವು ಹೇಗೆ ಅರಿಯಬಹುದು? (2)

ಯೆಹೂದ್ಯರ ಹಾಗೂ ಅನ್ಯರ ಮೂಲಕವಾಗಿ, ಯೇಸುವಿನ ಕುರಿತಾದ ಅಲ್ಪ ಮಾಹಿತಿಯನ್ನು ತಿಳಿದ ನಂತರ, ಹೊಸ ಒಡಂಬಡಿಕೆಯಲ್ಲಿರುವ ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನನ ಸುವಾರ್ತೆಯಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ. ಯೇಸುವಿನ ಹಾಗೂ ಆತನು ಮಾಡಿದ ಮಹತ್ಕಾರ್ಯಗಳ ಕುರಿತು ನಾಲ್ಕು ಸುವಾರ್ತೆಗಳೂ ಸಹ ಸ್ಪಷ್ಟವಾದ ವಿವರಣೆಯನ್ನು ನೀಡುವದಾದರೂ, ಆತನ ಕುರಿತಾಗಿ ವಿವಿಧವಾದ ಮಾಹಿತಿಯನ್ನು ಸಹ ನೀಡುತ್ತವೆ. ಆದ್ದರಿಂದ ಒಂದರ ಬದಲಾಗಿ ನಾಲ್ಕು ಸುವಾರ್ತೆಗಳನ್ನು ಸಾಕ್ಷಿಗಳಾಗಿ ನೀಡಲಾಗಿದೆ.

## ಸುವಾರ್ತೆಗಳಿಂದ ನಾವುಗಳು ಏನನ್ನು ಅರಿಯಬಹುದು?

### ಮತ್ತಾಯ

ಯೇಸು ಇಸ್ರಾಯೇಲ್ಯರ ಘನವಾದ ಮೆಸ್ಸೀಯನು ಎಂದು ಮತ್ತಾಯನ ಸುವಾರ್ತೆ ಯಲ್ಲಿ ತಿಳಿಸಲಾಗಿದೆ. ಆತನು ದಾವೀದನ ವಂಶದವನು ಎಂದು ಸಿದ್ಧಾಂತ ಪಡಿಸಲು ಯೇಸುವಿನ ನಾಲ್ವತ್ತೆರಡು ತಲೆ ಮಾರುಗಳ ಹೆಸರನ್ನು ತಿಳಿಸಲಾಗಿದೆ. ಯಾಕೆಂದರೆ ಮೆಸ್ಸೀಯನು ದಾವೀದನ "ಮಗನು" ಹಾಗೂ ಆತನ ವಂಶವಳಿಯವನೂ ಆಗಿದ್ದಾನೆ. ಯೇಸುವಿನಿಂದ ಅನೇಕ ಸಂಗತಿಗಳು ಕಾರ್ಯಗತ ಗೊಂಡವು ಎಂದು ತಿಳಿಸಲು, ಹಳೆಯ ಒಡಂಬಡಿಕೆಯಿಂದ ಅನೇಕ ವಾಕ್ಯಗಳನ್ನು ಬರಹಗಾರನು ಪ್ರಕಟಿಸಿರುವನು. ಮತ್ತಾಯನ ಸುವಾರ್ತೆಯಲ್ಲಿ ಯೇಸುವನ್ನು ಮಹಾ ಧರ್ಮಶಾಸ್ತ್ರವನ್ನು ನೀಡಿದ, ಹಾಗೂ ಇಸ್ರಾಯೇಲ್ಯರಿಗೆ ಉಪದೇಶ ನೀಡಿದ "ಹೊಸ ಮೋಶೆ" ಎಂದು ಪ್ರತಿನಿಧಿಸಲಾಗಿದೆ.

ಮತ್ತಾಯನ ಸುವಾರ್ತೆಯಲ್ಲಿ ಪ್ರಮುಖವಾದ ಐದು ಪ್ರಸಂಗಗಳನ್ನು ಪ್ರಕಟಿಸಲಾಗಿದೆ (ಅಧ್ಯಾಯ 5-7; 10; 13; 18; 24-25), ಅವುಗಳನ್ನು ಸಾಮ್ಯರೂಪದಲ್ಲಿ ತಿಳಿಸಲಾಗಿದೆ. ಇದರಲ್ಲಿ ಯೇಸು ನೀಡಿದ ಅನೇಕ ಭೋದನೆಗಳು ಒಳಗೊಂಡಿವೆ. ಅದರಲ್ಲಿ "ಮೋಶೆಯ ನೀಡಿದ ಐದು ಪುಸ್ತಕಗಳ" ಸಂಕೇತಗಳನ್ನು ಪಂಡಿತರುಗಳು ತಿಳಿಸಿರುವರು (ಪಂಚಕಾಂಡಗಳು; ಆದಿಕಾಂಡ; ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶ ಕಾಂಡ). ಮೋಶೆಯು ಸೀನಾಯಿ ಪರ್ವತದ ಮೇಲೆ ಹೋಗಿ, ದೇವರ ಹಸ್ತಗಳಿಂದ ಧರ್ಮಶಾಸ್ತ್ರವನ್ನು ಪಡೆದಂತೆ, ಯೇಸು ಕ್ರಿಸ್ತನು ಪರ್ವತದ ಮೇಲೆ ಪ್ರಸಂಗ ಮಾಡಿದನು (ಅದ್ಯಾಯ 5-7), ಅದರಲ್ಲಿ ಧರ್ಮಶಾಸ್ತ್ರದ ಅನೇಕ ಅಂಶಗಳು ಒಳಗೊಂಡಿವೆ.[1] ಮತ್ತಾಯನ ಬರವಣಿಗೆಯು, ಯೆಹೂದ್ಯರ ಸಂಪ್ರದಾಯಗಳನ್ನು ಹೋಲುತ್ತದೆ.

### ಮಾರ್ಕ

ಮಾರ್ಕನ ಸುವಾರ್ತೆಯು ಅನ್ಯರಿಗಾಗಿ ಬರೆಯಲಾಗಿದೆ ಎಂದು ಅರಿಯಬಹುದಾಗಿದೆ. ಮತ್ತಾಯನ ಹಾಗೆ ಮಾರ್ಕನು ಸಹ ಯೆಹೂದ್ಯರ ಕುರಿತು ಬರೆದಾಗ ಅವರ ಸಂಪ್ರದಾಯಗಳನ್ನು ಇತರರು ಅರಿಯುವಂತೆ ವಿವರಿಸಿದನು (ನೋಡಿರಿ ಉದಾಹರಣೆ

ಮಾರ್ಕ 7:1-4, 11). ಯಾಕೆಂದರೆ ರೋಮಾಯರು ಮಹಾ ಭಲವನ್ನು ಹೊಂದಿದ್ದರು ಎಂದು ತೋರ್ಪಡಸಿಕೊಳ್ಳುತ್ತಿದ್ದರಿಂದ, ಮಾರ್ಕನು ಯೇಸುವನ್ನು ಮಹತ್ಕಾರ್ಯಗಳನ್ನು ಮಾಡುವ "ದೇವರ ಮಗನು" ಎಂದು ಪ್ರಚುರಪಡಿಸಿದನು. ಅವನು ಆತನನ್ನು ದೇವರ ಮಗನು ಎಂದು ತನ್ನ ಸುವಾರ್ತೆಯ ಆರಂಭದ ಪದಗಳಲ್ಲಿ ತಿಳಿಸಿರುವನು. ತನ್ನ ಸುವಾರ್ತೆಯ ಅಂತ್ಯದಲ್ಲಿ, ಯೇಸುವನ್ನು ಕ್ರೂಜೆಗೆ ಹಾಕಿದ ಅಧಿಕಾರಿಗಳು ಆತನನ್ನು ಕುರಿತು, "ಈತನು ನಿಜವಾಗಲು ದೇವರ ಮಗನು" ಎಂದು ಅರಿಕೆ ಮಾಡಿದರು ಎಂದು ಬರೆದಿರುವನು! (ಮಾರ್ಕ 15:39). ಈ ಅಂಶವನ್ನು ಕೇಂದ್ರ ಪ್ರಸ್ತಾಪವನ್ನಾಗಿ ಮಾಡುವ ಕಾರಣದಿಂದ ಈ ಸುವಾರ್ತೆಯನ್ನು ಬರೆದಿರುವನು.

ಮತ್ತಾಯನು ಯೇಸುವಿನ ಉಪದೇಶಗಳಿಗೆ ಒತ್ತು ನೀಡಿರುವಂತೆ, ಮಾರ್ಕನು ಯೇಸುವಿನ ಕ್ರಿಯೆಗಳನ್ನು ಅಂದರೆ, ಯೇಸು ಮಾಡಿದ ಹದಿನೇಳು ಮಹತ್ಕಾರ್ಯಗಳನ್ನು ಹಾಗೂ ನಾಲ್ಕು ಸಾಮ್ಯಗಳನ್ನು ತಿಳಿಸಿರುವನು. ಈ ಪ್ರಕಾರದಂತೆ, ಯೇಸು ದೆವ್ವಗಳನ್ನು ಬಿಡಿಸಿದ ಅನೇಕ ಘಟನೆಗಳನ್ನು ದಾಖಲು ಮಾಡಿರುವನು (ಮಾರ್ಕ 1:23-26). ಸುವಾರ್ತೆಯಲ್ಲಿರುವ, ಯೇಸುವಿನ ಮಹತ್ಕಾರ್ಯಗಳನ್ನು ವಿವರಿಸಲು ಮಾರ್ಕನು "ಯೂತುಸ್" ಎಂಬ ಪದವನ್ನು ನಾಲ್ವತ್ತು ಸಾರಿ ಬಳಕೆ ಮಾಡಿರುವನು. ಅದನ್ನು "ತಕ್ಷಣವೇ" ಎಂದು ಅನುವಾದ ಮಾಡಲಾಗಿದೆ; ಅದನ್ನು ಅನೇಕ ಬಾರಿ ("ತದನಂತರ"; KJV ಎಂದು ಬಳಸಲಾಗಿದೆ). ಆದರೆ ಗ್ರೀಕ್ ಭಾಷೆಯ ಪ್ರಕಾರ, ಯೇಸು ಬಲಪರಾಕ್ರಮದ ಕಾರ್ಯವನ್ನು ನಡೆಸುವವನು ಎಂದು ಮಾರ್ಕನು ಒತ್ತಿ ಹೇಳಿರುವನು.

**ಲೂಕ**

ಯೆಹೂದ್ಯನಲ್ಲದ ಲೂಕನು ಮಾತ್ರ ಹೊಸ ಒಡಂಬಡಿಕೆಯಲ್ಲಿನ ಲೂಕನ ಸುವಾರ್ತೆಯನ್ನು ಬರೆದಿರುವನು; ಸಕಲ ಮಾನವರಿಗೆ ಯೆಹೂದ್ಯರಿಗೂ, ಅನ್ಯರಿಗೂ, ಹಾಗೂ ಸಮಾಜದ ಅತಿ ಕಡುಬಡವರಿಗೆ, ಯೇಸು "ಒಂದು ಶುಭ ಸಂದೇಶ" ("ಸುವಾರ್ತೆ" ಎಂದು ಬರೆದಿರುವನು) ಇದನ್ನು ಸಿದ್ಧಾಂತ ಪಡಿಸಲು, ಯೆಹೂದ್ಯರೊಳಗಿನ, ಬಡವರಿಗೆ, ಕುಷ್ಟರೋಗಿಗಳಿಗೆ ಸುಂಕದವರಿಗೆ ಸ್ತ್ರೀಯರು ಹಾಗೂ ಸಮಾರ್ಯದವರಿಗೂ ರಕ್ಷಣೆಯ ಸ್ವಸ್ಥತೆಯನ್ನು ಯೇಸು ನೀಡಿರುವನು: ಸುವಾರ್ತೆಗಳನ್ನು ಬರೆದವರಲ್ಲಿ ಲೂಕನು ಯೇಸುವನ್ನು ಒಂದು ಐತಿಹಾಸಿಕವಾದ ಕೇಂದ್ರ ಬಿಂದುವನ್ನಾಗಿ ದಾಖಲಿಸಿರುವನು (ಹಾಗೂ ಯಾರು ಸಹ ಯೇಸುವಿನ ಈ ಸಂಗತಿಯನ್ನು ಅಲ್ಲಗಳೆದಿರುವದಿಲ್ಲ). ಉದಾಹರಣೆಗೆ ಲೂಕ 1:1-4. ಯೇಸುವಿನ ಕುರಿತಾಗಿ ಇತರರು ದಾಖಲಿಸಿರುವ ಸಲಹೆಗಳನ್ನು ಸಹ ಪಡೆದಿರುವನು (ಅವನು ತನ್ನದೇ ಎಂದು ಹೇಳಿರುವದಿಲ್ಲ). ಲೂಕ 3:1, 2ರಲ್ಲಿ ಇದು ಐತಿಹಾಸಿಕವಾದ ಪ್ರಮುಖ ಸಂಗತಿಯಾಗಿದೆ, ಇಲ್ಲಿ ಸ್ನಾನಿಕನಾದ ಯೋಹಾನನು ಮಾಡಿದ ಸಾರ್ವಜನಿಕವಾದ ಸೇವೆಯ ಕುರಿತಾಗಿ ಬರೆಯಲ್ಪಟ್ಟಿದೆ (ಯೇಸುವಿಗೆ ಸಂಬಂಧಿಸಿದೆ). ಪ್ರಾಚೀನ ಹೇಳಿಕೆಯಲ್ಲಿ, ಇದು ಯೇಸುವಿನ ಚಟುವಟಿಕೆಗಳ ಪ್ರಮುಖ ದಾಖಲೆಯಾಗಿರುತ್ತದೆ. ರೋಮಾ ಚಕ್ರವರ್ತಿಯ ಹೆಸರನ್ನು ದಾಖಲು ಮಾಡುವಲ್ಲಿ, ಲೂಕನು ಮೊದಲಿಗನಾಗಿರುವನು, ಸುವಾರ್ತೆಯ ಇತರ ಬರಹಗಾರರು ತಿಳಿಸಲಾರದ ಸಂಗತಿಗಳನ್ನು ಲೂಕನು ತಿಳಿಸಿರುವನು. ಕ್ರೂಜಿತನಾಗುವದಕ್ಕಾಗಿ, ಯೇಸು ಗಲಿಲಾಯದಿಂದ ಯೆರೂಸಲೇಮಿಗೆ ಮಾಡಿದ "ಪ್ರಯಾಣದ ಕುರಿತು" ಬರೆದಿರುವನು (ಅಧ್ಯಾಯ 9-19), ಬಲ ಹಾಗೂ ಬಲವಿಲ್ಲದವರಿಗೆ ಉಪದೇಶ ಮಾಡಿ, ಯೇಸು ಮಹಾ ಅದ್ಭುತಗಳನ್ನು ಮಾಡಿದನು ಎಂದು ದಾಖಲಿಸುವಲ್ಲಿ ಲೂಕನು ಮುಂದುವರೆದಿರುವನು.

ಮತ್ತಾಯ, ಮಾರ್ಕ ಹಾಗೂ ಲೂಕನ ಬರವಣಿಗೆಯನ್ನು "ಸೈನೋಪ್ಟಕ್ಸ್ ಸುವಾರ್ತೆ" ಎಂದು ಕರೆದಿರುವರು. ಯಾಕಂದರೆ ಅವರೆಲ್ಲರು ಯೇಸುವಿನ ಜೀವನ ಚರಿತ್ರೆಯ ವಿಚಾರಗಳನ್ನು ಒಂದೇ ವಿಧದಲ್ಲಿ ಬರೆದಿರುವರು. "ಸೈನೋಪ್ಟಿಕ್ಸ್," ಅಂದರೆ ಎರಡು ಗ್ರೀಕ್

ಪದಗಳ ಪ್ರಕಾರ "ಸಮಾನಾಂತರದಲ್ಲಿ ನೋಡುವದು" ಎಂಬ ಅರ್ಥವಾಗಿದೆ.

**ಯೋಹಾನ**

ಯೇಸು ಕ್ರಿಸ್ತನು "ದೈವೀಕ ವಾಕ್ಯವಾಗಿದ್ದು" (ಯೋಹಾನ 1:1), ಆತನ ಮೂಲಕವಾಗಿ ಮಾತ್ರ ದೇವರು ತನ್ನನ್ನು ಪ್ರಕಟಿಸಿಕೊಂಡನು ಎಂಬ ಸತ್ಯವನ್ನು ಪ್ರಕಟಿಸುವ ಸಲುವಾಗಿ ಯೋಹಾನನ ಸುವಾರ್ತೆಯನ್ನು ಬರೆಯಲಾಗಿದೆ. ಇದರಲ್ಲಿ ಸೈನೋಪ್ಟಿಕ್ಸ್‌ಗಳ ಹಾಗೆ, ಯೇಸುವಿನ ಚಿತ್ರಣವನ್ನು ಸವಿಸ್ಥಾರವಾಗಿ ಕಾಣದೆ ಹೋದರು, ಯೇಸುವಿನ ಬಗ್ಗೆ ಅನುವಾದವನ್ನು ನೀಡಿ (ಉದಾಹರಣೆ ಯೇಸು ದೆವ್ವಗಳನ್ನು ಬಿಡಿಸುವ ಕೃತ್ಯಗಳನ್ನು ತಿಳಿಸಿರುವದಿಲ್ಲ); ಯೇಸುವಿನ ಮಾತುಗಳನ್ನು ತಿಳಿಸಲಾಗಿದೆ. ಸೈನೋಪ್ಟಿಕ್ಸ್ ಸುವಾರ್ತೆಗಳಲ್ಲಿ ಇರದೆ ಇರುವ, ವಿಶೇಷಣವನ್ನು ಯೋಹಾನನ ಸುವಾರ್ತೆಯಲ್ಲಿ ತಿಳಿಸಲಾಗಿದೆ. ಆದ್ದರಿಂದ ಮತ್ತಾಯ, ಮಾರ್ಕ ಹಾಗೂ ಲೂಕನ ಸುವಾರ್ತೆಯಲ್ಲಿರುವ ಕೆಲವು ಅಂಶಗಳನ್ನು ಈ ಸುವಾರ್ತೆಯಲ್ಲಿ ತಿಳಿಸಿರುವದಿಲ್ಲ. ಯೇಸುವನ್ನೇ ನಂಬುವ ಗುರಿಯ ಕುರಿತು ಈ ಸುವಾರ್ತೆಯಲ್ಲಿ ಬರೆಯಲಾಗಿದೆ. ಈ ಸುವಾರ್ತೆಯಲ್ಲಿ ಮಾತ್ರ "ನೀನು" ಎಂಬ ಎರಡನೆಯ ವ್ಯಕ್ತಿತ್ವವನ್ನು ತಿಳಿಸಲಾಗಿದೆ:

> ಯೇಸು ಇನ್ನು ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ (ಯೋಹಾನ 20:30, 31).

ಯೋಹಾನನ ಸುವಾರ್ತೆಯಲ್ಲಿ ಯೇಸುವನ್ನು ಗುರುತಿಸುವ ಒಂದು ವಿಶೇಷ ತೆಯನ್ನು ಗಮನಿಸುತ್ತೇವೆ. ಇತರೆ ಸುವಾರ್ತೆಗಳಲ್ಲಿ ಯೇಸುವಿನ ಮೆಸ್ಸೀಯನತ್ವಕ್ಕೆ ಒತ್ತು ನೀಡಲಾಗಿದ್ದರೆ, ಯೋಹಾನನು ಯೇಸುವೇ "ಮೆಸ್ಸೀಯನು" ಎಂದು ನೇರವಾಗಿ ತಿಳಿಸಿರುವನು. ಯಾಕಂದರೆ ಯೋಹಾನನ ಸುವಾರ್ತೆಯಲ್ಲಿ ದಾಖಲಾಗಿರುವ ಸಂಗತಿಗಳು, ಯೆರೂಸಲೇಮಿನಲ್ಲೂ ಹಾಗೂ ಅದರ ಸುತ್ತಮುತ್ತಲೂ ಜರುಗಿದ್ದ ಕಾರ್ಯಗಳಾಗಿದ್ದವು, ಇಲ್ಲಿ ಯೇಸು ಯೆಹೂದ್ಯರಿಂದ ವಿರೋಧವನ್ನು ಎದುರಿಸಿದ್ದನು. ಇತರೆ ಸುವಾರ್ತೆಗಳಲ್ಲಿ ಗಲಿಲಾಯದಲ್ಲಿ ನಡೆದ ಕೃತ್ಯಗಳನ್ನು ದಾಖಲಿಸಿದ್ದರು, ಇಲ್ಲಿ ಯೇಸು "ತಾನೇ ಮೆಸ್ಸಿಯನು" ಎಂದು ಪ್ರಕಟಿಸಿಕೊಂಡಿರಲಿಲ್ಲ.

"ಯೇಸುವಿನ ಪೂರ್ಣವಾದ ಜೀವಿತವನ್ನು" ಪ್ರತಿಬಿಂಬಿಸಲು ನಾಲ್ಕು ಸುವಾರ್ತೆಗಳನ್ನು ಬರೆದಿರುವದಿಲ್ಲ. ಯೇಸುವಿನ ಸಹಜವಾದ ಸಂಗತಿಗಳನ್ನು ಮಾತ್ರ ನಮೂದಿಸಲಾಗಿದೆ. ಆಧುನಿಕ ಜೀವನ ಚರಿತ್ರೆಗಳಲ್ಲಿ, ವ್ಯಕ್ತಿಯ ಜನನ ವಿಧ್ಯಾರ್ಹತೆ, ಹಾಗೂ ಅವರ ಆಸಕ್ತಿಗಳ ಬಗ್ಗೆ ಬರೆದಿರುತ್ತಾರೆ. ಆದರೆ ಸುವಾರ್ತೆಗಳಲ್ಲಿ ಯೇಸುವಿನ ಜೀವಿತದ ಕಡೇಯ ಮೂರು ವರ್ಷಗಳ ಸೇವೆಯ ಚರಿತ್ರೆಯನ್ನು ಮಾತ್ರ ಬರೆಯಲಾಗಿದೆ. ಆತನ ಮರಣ ಹಾಗೂ ಪುನರುತ್ಥಾನದ ಕಡೆಯ ವಾರಕ್ಕೆ ಆಧ್ಯತೆ ನೀಡಲಾಗಿದೆ. ಸುವಾರ್ತೆಗಳನ್ನು ಕೆಲವು ಸಾರಿ, "ಆತನ ಭಾದೆಗಳ ವಿಸ್ತಾರವಾದ ಪೀಠಿಕೆ" ಎಂದು ಕರೆಯಲಾಗಿದೆ. ಉದಾಹರಣೆಗೆ ಮತ್ತಾಯನು ಬರೆದ ಸುವಾರ್ತೆ ಇಪ್ಪತ್ತೆಂಟು ಅಧ್ಯಾಯಗಳಲ್ಲಿ ಕಡೇಯ ಎಂಟು ಅಧ್ಯಾಯಗಳು, ಮಾರ್ಕನು ಬರೆದ ಸುವಾರ್ತೆಯ ಹದಿನಾರು ಅಧ್ಯಾಯಗಳಲ್ಲಿ, ಲೂಕನು ಬರೆದ ಸುವಾರ್ತೆಯ ಇಪ್ಪತ್ತು-ನಾಲ್ಕು ಅಧ್ಯಾಯಗಳಲ್ಲಿ ಕಡೇಯ 5½ ಅಧ್ಯಾಯಗಳು, ಯೋಹಾನನ ಸುವಾರ್ತೆಯ ಅರ್ಧಭಾಗದಲ್ಲಿ ಆತನ ಬಾಧೆಗಳ ಕುರಿತು ನೋಡುತ್ತೇವೆ (ಅಧ್ಯಾಯ 12-21). ಯಾಕಂದರೆ ಇದು ಯೇಸುವಿನ ಚರಿತ್ರೆಯ ಪ್ರಮುಖ ಅಂಶವಾಗಿರುವದನ್ನು ಸುವಾರ್ತೆಗಳಲ್ಲಿ ಗಮನಿಸಲಾಗಿದೆ. ಲೂಕನು ಮಾತ್ರ ಯೇಸುವಿನ ಬಾಲ್ಯದ ಕುರಿತು, ಅಂದರೆ ಆತನು ಹನ್ನೆರಡು ವರ್ಷದವನಾಗಿದ್ದ

ಸಂಗತಿಯನ್ನು ತಿಳಿಸಿರುವನು (ಲೂಕ 2:41-52). ಯೇಸುವಿನ (ಎರಡರಿಂದ ಮುವತ್ತು ವರ್ಷಗಳವರೆಗಿನ) ಇತರೆ ಚರಿತ್ರೆಗೆ ಗಮನ ನೀಡಿರುವದಿಲ್ಲ.

ಸುವಾರ್ತೆಗಳಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ನೀಡಿರುವದಿಲ್ಲ, ಆದು ಅವರ ಉದ್ದೇಶವೂ ಆಗಿರುವದಿಲ್ಲ. ಯೇಸುವಿನ ಕುರಿತಾದ ಪ್ರಮುಖ ಸತ್ಯವನ್ನು ಪ್ರಕಟಿಸುವದೇ ಅವರ ಉದ್ದೇಶವಾಗಿತ್ತು. ಆತನು ಯಾರು; ಆತನು ಏನು ಮಾಡಿದನು; ಆತನ ಜೀವಿತವೇನು; ಮತ್ತು ಆತನ ಮರಣ ಹಾಗೂ ಪುನರುತ್ಥಾನದ ಸಾಧನೆಯನ್ನು ತಿಳಿಸಲಾಗಿದೆ. ಸುವಾರ್ತೆಗಳಿಲ್ಲದೆ, ಯೇಸುವಿನ ಕುರಿತು ಅರಿಯುವದು ಅಲ್ಪ ಪ್ರಯತ್ನವಾಗುತ್ತದೆ.

## ಈ ಮೂಲಗಳನ್ನು ನಾವು ನಂಬಬಹುದೇ?

ಈಗ ನಾವುಗಳು ಕ್ರೈಸ್ತ ಬರವಣಿಗೆಯ ಬಗ್ಗೆ ಮಾತನಾಡುತ್ತಿರುವದರಿಂದ (ಅನ್ಯ ಇತಿಹಾಸಗಾರರಂತೆ ಸ್ಯೂಟೋನಿಯಸ್) ಸುವಾರ್ತೆಗಳ ಬರವಣಿಗೆಗಾರರನ್ನು ಹೆಚ್ಚು ಅವಲಂಭಿಸುವ ಪ್ರಶ್ನೆಯು ಉದ್ಭವಿಸುತ್ತದೆ. ಸುವಾರ್ತೆಗಳನ್ನು ನಂಬಬಹುದೇ? ಅದರಲ್ಲಿ ಯೇಸುವಿನ ಚರಿತ್ರೆಯಿದೆ ಎಂದು ತಿಳಿಯಬಹುದೇ - ಅಥವಾ ಅನೇಕರು ನಂಬುವಂತೆ, ಇದು ಒಂದು ಅಲ್ಪ ಚರಿತ್ರೆ ಇರುವ ಧಾರ್ಮಿಕ ಸಂಗತಿಯೇ? ಈ ಪ್ರಶ್ನೆಗಳಿಗೆ ಪ್ರಖ್ಯಾತ ಇತಿಹಾಸಕಾರರು ಉತ್ತರವನ್ನು ನೀಡಿರುವರು,[2] ಈ ಚರ್ಚೆಯಲ್ಲಿ ಗುರುತರವಾದ ಸಂಗತಿಯನ್ನು ಗಮನಿಸಬಹುದಾಗಿದೆ.

ಸುವಾರ್ತೆಯ ಅವಲಂಭನೆಯನ್ನು ಏಕೆ ಬಹಳಷ್ಟು ಜನರು ಪ್ರಶ್ನಿಸುವರು? ಅನೇಕ ಕಾರಣಗಳಲ್ಲಿ, ಕೆಲವನ್ನು ಗಮನಿಸಬಹುದು.

*ಸುವಾರ್ತೆಗಳನ್ನು ಕ್ರೈಸ್ತರೆ ಬರೆದಿರುವರು ಎಂಬದು ಕೆಲವರ ಪ್ರಶ್ನೆಯಾಗಿದೆ.* ಬರಹಗಾರರು ಯೇಸುವಿನ ಕುರಿತು ವಾಸ್ತವಾಂಶವನ್ನು ತಿಳಿಸಿರುವದಿಲ್ಲ ಎಂದಿರುವರು. ಈ ಅಂಶವು ಸರಿ ಎನ್ನಿಸಬಹುದು, ಅದನ್ನು ಕೂಲಂಕುಶ ಪರಿಶೀಲನೆ ಮಾಡೋಣ. ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನರು ಯೇಸುವಿನ ಕುರಿತಾದ ತಮ್ಮ ಕಥೆಯು ಕಾಲ್ಪನಿಕವಲ್ಲ ಎಂದು ಸಂದೇಹಪಡದ ತಮ್ಮ ಓದುಗರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರು. ಅವರು ಸಾಧ್ಯವದದನ್ನು ತಿಳಿಸದೆ, *ಸಂಭವಿಸಬಹುದಾದ* ಸಂಗತಿಯನ್ನು ತಿಳಿಸಿದರು. ಮನುಷ್ಯರನ್ನು ಮೋಸ ಪಡಿಸುವ ಸಲುವಾಗಿ ಸುವಾರ್ತೆಗಳನ್ನು ಬರೆದಿರುವದಿಲ್ಲ ಎಂಬುದು ಖಚಿತವಾಗಿದೆ.

ಅವರು ಬರೆದದ್ದು ತಾವೇ ಕಂಡು ಹಿಡಿದಿದ್ದ ಸಂಗತಿಯಾಗಿದ್ದರೆ, ಅದರಲ್ಲಿ ಅವರದೇ ಆದ ಯೋಚನೆಗಳು ಇರುವ ಸಾಧ್ಯತೆಯಿತ್ತು. (1) ಕನ್ಯಾ ಜನನದ ಕಥೆಯನ್ನು ಗಮನಿಸಿರಿ, ಉದಾಹರಣೆ (ಮತ್ತಾಯ 1 ಮತ್ತು ಲೂಕ 1ರಲ್ಲಿ ಮಾತ್ರವಿದೆ). ಇದರಲ್ಲಿ ಪುರಾಣಗಳಲ್ಲಿರುವಂತೆ, ದೇವತೆಗಳು ಮಾನವ ಸ್ತ್ರೀಯರನ್ನು ಕೂಡಿರುವ ಹಾಗೆ ಇರುವದಿಲ್ಲ. ಮೆಲ್ನೋಟಕ್ಕೆ ಹಾಗೆಕಂಡರೂ, ಇಂತಹ ಕನ್ಯಾ ಗರ್ಭದ ವಿಚಾರವು ಅನೇಕರಿಗೆ ಅಡಚಣೆಯಾಗಿರುತ್ತದೆ. ಅದು ತಪ್ಪಾಗಿದ್ದರೆ, ಮತ್ತಾಯ ಮತ್ತು ಲೂಕರು ಏಕೆ ಅದನ್ನು ಬರೆದಿರುತ್ತಿದ್ದರು? (2) ಸ್ನಾನಿಕನಾದ ಯೋಹಾನನಿಂದ ಯೇಸು ಹೊಂದಿದ ದೀಕ್ಷಾಸ್ನಾನದ ಬಗ್ಗೆ ಏನನ್ನು ಅರಿಯಬಹುದು? ಯಾಕಂದರೆ ಮಾನಸಾಂತರ ಹಾಗೂ ಪಾಪಕ್ಷಮೆಗಾಗಿ ಯೋಹಾನನು ದೀಕ್ಷಾಸ್ನಾನ ಮಾಡಿಸುತ್ತಿದ್ದನು (ಮಾರ್ಕ 1:4), (ಮತ್ತಾಯ 3:14, 15) ಯೇಸು ಪಾಪ ರಹಿತನಾಗಿದ್ದರೂ, ಯೋಹಾನನಿಂದ ದೀಕ್ಷಾಸ್ನಾನವನ್ನು ಬಯಸಿದನು. (ನೋಡಿರಿ ಉದಾಹರಣೆ 2 ಕೊರಿಂಥ 5:21; ಇಬ್ರಿಯ 4:15; 1 ಪೇತ್ರ 2:22.) ಬರವಣಿಗೆಗಾರರು ಇಂತಹ ಗೊಂದಲಮಯವಾದ ಬರವಣಿಗೆಯನ್ನು ಬರೆದಿರುವದರಿಂದ, ಈ ದಿನಗಳಲ್ಲಿ ಅನೇಕ ಪಂಡಿತರುಗಳು ಹಾಗೂ ದೈವ ಶಾಸ್ತ್ರಜ್ಞರು ಈ ವಿಷಯದಲ್ಲಿ ಚರ್ಚೆ ಮಾಡುವಂತಾಗಿದೆಯಲ್ಲವೇ? (3) ಆತನ ಶಿಷ್ಯರುಗಳು, ಯೇಸುವನ್ನು ನಂಬುವ ವಿಚಾರದಲ್ಲಿ ಗೊಂದಲವನ್ನು ಏಕೆ ಉಂಟುಮಾಡಿದರು? ಬರವಣಿಗೆಗಾರರು ಇಂತಹ ಒಪ್ಪಲಾರದಂತ ಚರ್ಚೆಗಳನ್ನು ನಿರ್ಮಾಣಮಾಡಿರುವದರಿಂದ

ಇತರೆ ವಿಷಯಗಳಲ್ಲಿ ಸತ್ಯವನ್ನು ತಿಳಿಸಿರುವರೇ?

ಆ ಸುವಾರ್ತೆಗಳನ್ನು ಕ್ರೈಸ್ತರು ಬರೆದಿರುವದರಿಂದ, ಆ ನಾಲ್ಕು ಸುವಾರ್ತೆಗಳು ಸತ್ಯವನ್ನೆ ಹೇಳುವ ಸಾಧ್ಯತೆ ಇದೆಯೇ? ಇದು ಕಷ್ಟಕರ ಪ್ರಶ್ನೆಯಾಗಿದೆ. ಐತಿಹಾಸಿಕ ಘಟನೆಯಲ್ಲಿ ಆಸಕ್ತಿ ಇಲ್ಲದವನ ಬಳಿ, ಆ ವಿಷಯದ ಕುರಿತು ಚರ್ಚೆ ಮಾಡಿದಂತಾಗುತ್ತದೆ! ಘಟನೆಯನ್ನು ನೋಡದವನ ಬಳಿ ಅವುಗಳ ಕುರಿತು ಚರ್ಚಿಸಿದಂತಾಗುತ್ತದೆಯಲ್ಲವೇ? ಅದನ್ನು ಕಣ್ಣಾರೆ ಕಂಡವರ ಅಥವಾ ಸಾಕ್ಷಿಗಳ ಬಳಿ ಸೆಪ್ಟಂಬರ್ 11, 2001 ರಲ್ಲಿ ಆ ವಿಷಯದ ಕುರಿತು ಮಾತನಾಡಿದರೆ, ಅದು ಹೆಚ್ಚು ಅರ್ಥಗರ್ಭಿತವಲ್ಲವೇ? ಈ ಉದಾಹರಣೆಯನ್ನೇ ಸುವಾ ರ್ತೆಗಳಲ್ಲಿ ಕಾಣುತ್ತೇವೆ.

*ಸುವಾರ್ತೆಗಳ ನಿಖರತೆಯ ಬಗ್ಗೆ, ಯೇಸುವಿನ ಜೀವಿತ ಕಾಲ ಹಾಗೂ ಅದನ್ನು ಬರೆದಂತ ಸಮಯದ ನಡುವಿನ ಕಾಲದ ಬಗ್ಗೆಯೂ ಪ್ರಶ್ನೆ ಉದ್ಭವಿಸುತ್ತದೆ.* ಅನೇಕ ಪಂಡಿತರ ಲೆಕ್ಕಾಚಾರದ ಪ್ರಕಾರ, ಜೀವಿಸಿದ ಕಾಲದ ನಂತರ ಅಂದರೆ, ನಾಲ್ವತ್ತರಿಂದ, ಎಪ್ಪತ್ತು ವರ್ಷಗಳ ಅಂತರದಲ್ಲಿ ಸುವಾರ್ತೆಯನ್ನು ಬರೆದಿರಬಹುದು (ಕ್ರಿ.ಶ. 70-100, ಅಥವಾ ಕೆಲವು ಪಂಡಿತರ ಪ್ರಕಾರ ಮೂವತ್ತು ವರ್ಷ). ಸಂದೇಹಪಡುವ ಕೆಲವರ ಪ್ರಕಾರ, "ಈ ಸಮಯದಲ್ಲಿ ಇದರ ಕುರಿತ ಕಥೆಯು ವೃದ್ಧಿಯಾಗಿರುವದರಿಂದ, ಯೇಸುವಿನ ಕುರಿತಾದ ಐತಿಹಾಸಿಕ ಸಂಗತಿಗಳಿಗಿಂತಲೂ, ಅದು ಕೇವಲ ಪುರಾಣವೇ ಎಂಬದು ಅವರ ತಿಳುವಳಿಕೆಯಾಗಿದೆ."[3]

ಇತರೆ ಗ್ರಂಥಗಳಿಗಿಂತಲೂ, ಸುವಾರ್ತಾ ಬರವಣಿಗೆಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡ ಲಾಗಿದೆ. ಜೂಲಿಯಸ್ ಸೀಜರ್ ಹಾಗೂ ಇತರೆ ಪ್ರಮುಖ ವ್ಯಕ್ತಿಗಳ ಚರಿತ್ರೆಯ ಕುರಿತು, ಅವುಗಳು ಬರೆಯಲ್ಪಟ್ಟ ಸಮಯದಲ್ಲಿ ಹೆಚ್ಚು ಅಂತರವಿರುವದಾದರೂ, ಯಾರೂ ಅದರ ಬಗ್ಗೆ ಚಕಾರ ಎತ್ತುವದಿಲ್ಲ, ಆದರೆ ಸುವಾರ್ತೆಯ ಬಗ್ಗೆ ಪ್ರಶ್ನೆಗಳು ಉದ್ಭವಿಸಿರುತ್ತದೆ. ಸುವಾರ್ತೆಗಿಂತಲೂ, ಸಮಯದ ಅಂತರ ಕಡಿಮೆ ಇರುವ ಮೂಲಗಳು ಲಭ್ಯವಿದೆ - ಪೌಲನ ಪತ್ರಿಕೆಗಳಲ್ಲಿ ಸುವಾರ್ತೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಗಮನಿಸಬಹುದು. ಮೊದಲ ಶತಮಾನದ 40ನೇ[4] ವರ್ಷದಲ್ಲಿ ಪೌಲನು ತನ್ನ ಪತ್ರಿಕೆಯನ್ನು ಬರೆಯಲು ಆರಂಭಿಸಿದನು, ಆದ್ದರಿಂದ ಸುವಾ ರ್ತೆಗಳನ್ನು ಬರೆಯುವ ಮೊದಲೇ ಅಂದರೆ 20 ವರ್ಷಗಳ ಹಿಂದೆ ಅವನ ಪತ್ರಿಕೆಗಳು ಬರೆಯಲ್ಪಟ್ಟಿದ್ದವು. ಜನರು ಯೇಸುವಿನ ದೈವತ್ವ ಮರಣ ಪುನರುತ್ಥಾನದಲ್ಲಿ ನಂಬಿಕೆ ಇಟ್ಟಿದ್ದರು ಎಂಬುದನ್ನು ಅವನು ದೃಢಪಡಿಸಿದ್ದನು. ಕಥೆಗೆ ಬಣ್ಣ ಕಟ್ಟಿರುವದಾದರೆ, ಅದು ನಾಲ್ವತ್ತು ವರ್ಷಗಳ ಅಂತರದಲ್ಲೇ ನಡೆದಿರುವ ಸಾಧ್ಯತೆ ಇರುವದಿಲ್ಲವೇ. ಅಂದರೆ ಯೇಸುವನ್ನು ಕಣ್ಣಾರೆ ಕಂಡಂತ ಜನರು ಇನ್ನು ಜೀವಿಸಿದ್ದರು ಎಂಬ ಅರ್ಥವನ್ನು ನೀಡುತ್ತದೆ. ಒಂದು ವೇಳೆ, ಪೌಲ, ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನರು ಹೇಳಿರುವದು ಸುಳ್ಳಾಗಿದ್ದರೆ, ಕಣ್ಣಾರೆ ಕಂಡವರ ಸತ್ಯದ ಮನವೊಲಿಸಲು ಅವರಿಗೆ ಸಾಧ್ಯತೆಯಾಗುತ್ತಿರಲಿಲ್ಲ![5]

*ಸುವಾರ್ತೆಗಳಲ್ಲಿ ವ್ಯತ್ಯಾಸಗಳಿರುವದರಿಂದ, ಸುವಾರ್ತೆಗಳನ್ನು ಅವಲಂಭಿಸಬಹುದೇ ಎಂಬ ಪ್ರಶ್ನೆಯು ಇರಬಹುದಲ್ಲವೇ?* "ವ್ಯತ್ಯಾಸ" ಎಂಬುದರ ಮೇಲೆ ಉತ್ತರವು ಅವಲಂಭಿಸಿರುತ್ತದೆ. ಎರಡು ಸುವಾರ್ತೆಗಳು, ಯೇಸುವಿನ ಮಾತುಗಳನ್ನು ವ್ಯತ್ಯಾಸವಾಗಿ ದಾಖಲುಮಾಡಿದ್ದರೂ, ವ್ಯತ್ಯಾಸವುಳ್ಳ ದಾಖಲನ್ನು ಮಾಡುವ ಸಲುವಾಗಿ, ಸುವಾರ್ತಾ ಬರಹಗಾರರು, ಪರಸ್ಪರ ನಕಲು ಮಾಡಿರುವದಿಲ್ಲ. (ನಾಲ್ಕು ಜನರು ಒಟ್ಟಾಗಿ ಸೇರಿ ಇದನ್ನು ಮಾಡಿರಬಹುದು ಎಂಬ ಸಂದೇಹವೇ?)

ಸುವಾರ್ತೆಗಳಲ್ಲಿರುವ ಕೆಲವು ಐತಿಹಾಸಿಕ ಪ್ರಶ್ನೆಗಳಿಗೆ ಉತ್ತರ ಸಿಗಲಾರದು. ಉದಾಹರಣೆ ಲೂಕ 2:2ರಲ್ಲಿ ಯೇಸು ಬೆತ್ಲೆಹೇಮಿನಲ್ಲಿ ಜನಿಸಿದನು (ತಂದೆ ತಾಯಿಗಳ ಊರಾದ ನಜರೇತಿನಲ್ಲಿ ಜನಿಸಲಿಲ್ಲ) ಯಾಕಂದರೆ ಸಿರಿಯದಲ್ಲಿ ಕುರೇನಿಯನು ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಅಲ್ಲಿ ಖಾನೇಶುಮಾರಿ ಮಾಡಿಸಬೇಕಿತ್ತು. ಹಾಗೂ ಯೋಸೆಫಸನ ಪ್ರಕಾರ,

ಕುರೇನೇಯನು ನಂತರದ ಸಮಯದಲ್ಲಿ ಅಧಿಕಾರಿಯಾಗಿದ್ದನು (ಕ್ರಿ.ಶ. 6-9). ಆಗ ಅವನು ಖಾನೇಶುಮಾರಿ ಮಾಡಿಸಬೇಕೆಂಬ ಆಜ್ಞೆ ಹೊರಡಿಸಿದ್ದನು.[6] ಆದ್ದರಿಂದ ಲೂಕನಂಥ ಇತಿಹಾಸಕಾರನು ಇಂತಹ ಹೇಳಿಕೆಯನ್ನು ನೀಡುವದು ಅಸಾಧ್ಯವಾಗಿದೆ, ಇನ್ನೂ ಕೆಲವರ ಪ್ರಕಾರ ಕುರೇನಿಯನ್ನು ಈ ಸಮಯಕ್ಕಿಂತ ಮೊದಲೇ ಆಡಳಿತ ನಡೆಸಿದ್ದನು ಎಂದಿರುವನು; ಆದರೆ ಇದಕ್ಕೆ ಸಾಕ್ಷಿಗಳಿರುವದಿಲ್ಲ. ಆದರೆ ಈ ವ್ಯತ್ಯಾಸಗಳು ಯಾವುದೇ ವಿಧದಲೂ ಸುವಾರ್ತೆಯಲ್ಲಿರುವ ಯೇಸುವಿನ ವಿಚಾರಕ್ಕೆ ಧಕ್ಕೆ ತರಲಾರವು. ಸುವಾರ್ತೆಗೆ ವಿರೋಧವಾದವರು ಇಂತಹ ಪ್ರಶ್ನೆಗಳನ್ನು ಕೇಳಬಹುದು, ಆದರೆ ಬಲವಾದ ವಿರೋಧವು ಇರುವದಿಲ್ಲ.

*ನ್ಯಾಯಯುತವಾದ ಪರಿಶೀಲನೆಯಿಂದ ಸುವಾರ್ತೆಯನ್ನು ಅವಲಂಭಿಸಬಹುದೇ ಎಂಬ ವಿಚಾರಕ್ಕೆ ಇರುವ ಆಕ್ಷೇಪಗಳನ್ನು ಪರಿಶೀಲಿಸಬಹುದಾಗಿದೆ.* ಯೇಸು ಕ್ರಿಸ್ತನ ಕುರಿತಾದ ವಿಚಾರಗಳು ಕಲ್ಪನಾ ಕಥೆಗಳು ಎಂದು ಆದಿ ಕ್ರೈಸ್ತರು ತಿಳಿದಿದ್ದರೂ, ಅದನ್ನು ಅವರು ಅಂಗೀಕರಿಸಿ, ನಂತರ ಇತರರೂ ಸಹ ಆ ತತ್ವವನ್ನು ಅರಿಯುವಂತೆ ಮಾಡಿದರು ಎಂಬುದು ಒಂದು ಪರಿಕಲ್ಪನೆಯಾಗಿದೆ. ಇನ್ನೊಂದು ಪರಿಕಲ್ಪನೆ ಏನೆಂದರೆ ಅವರು ಅಪೊಸ್ತಲರಿಂದಲೂ ಹಾಗೂ ಸಭಾ ನಾಯಕರಿಂದಲೂ ಮೋಸ ಮಾಡಲ್ಪಟ್ಟರು ಎಂಬುದಾಗಿದೆ. ಅವರು ಈ ರೀತಿ ಅಪ್ರಮಾಣಿಕರಾಗಿ ಏಕೆ ಇದ್ದರು? ಎಂದು ಕಲ್ಪಿಸಿಕೊಂಡರು ಈ ವಿಷಯವು ಅಸಮಂಜಸವಾಗಿದೆ. ಫಿಲಿಪ್ಪಿಯವರ ಹೇಳಿಕೆಯನ್ನು ನೆನಪು ಮಾಡಿರಿ. ಯೇಸುವನ್ನು ದೇವರ ಮಗನು ಹಾಗೂ ಆತನು ಕ್ರೂಜಿತನಾಗಿ ಮರಣದಿಂದ ಎದ್ದು ಬಂದನು ಎಂದು ಉಪದೇಶಿಸಿದ ನಿಮಿತ್ತವಾಗಿ ಯೋಹಾನನನ್ನು ಹೊರತುಪಡಿಸಿ, ಇತರೆ ಅಪೊಸ್ತಲರನ್ನು ಕೊಂದುಹಾಕಿದ್ದರು. ಸಂದೇಹಿಸುವವರ ಪ್ರಕಾರ ಅವರು ಸುಳ್ಳನ್ನು ಬೋಧಿಸಿದ್ದರು - ಇದು ಸಾಧ್ಯವಿದೆಯೇ?

ಕೆಲವರು ಸುವಾರ್ತೆಗಳ ಬಗ್ಗೆ ಸಂದೇಹಿಸುತ್ತಾರೆ ಎಂದು ಗಮನಿಸಿದ ನಂತರ, ಒಂದು ವಿಚಾರವನ್ನು ತಿಳಿಯಲೇಬೇಕು: ಅದ್ಭುತ ಹಾಗೂ ಮಹತ್ಕಾರ್ಯಗಳ ವಿಷಯದಲ್ಲಿ ಕೆಲವರು ಪಕ್ಷಪಾತವನ್ನು ತೋರುವವರಾಗಿರುತ್ತಾರೆ. ಅಂತಹ ವಿಷಯಗಳು ಸತ್ಯವಲ್ಲ ಎಂದು ನಿರ್ಣಯಿಸಿರುತ್ತಾರೆ; ಆದ್ದರಿಂದ ಅಂಥವರು ಯೇಸುವಿನ ಕುರಿತು, ಆತನು ದೈವತ್ವ ಹೊಂದಿದ ದೇವರ ಮಗನು, ಮಹತ್ಕಾರ್ಯ ಮಾಡುವವನು ಎಂಬ ವಿಚಾರವನ್ನು ಕೇಳುವಾಗ, ಸಹಜವಾಗಿ ಅದು ಸತ್ಯವಲ್ಲವೆಂದು ಹೇಳಿ, ಇತರೆ ವಿವರವನ್ನು ನೀಡುತ್ತಾರೆ, ಅಂಥವರು ಅಪನಂಬಿಕೆಗೆ ತಳ್ಳಲ್ಪಟ್ಟವರಾಗಿದ್ದಾರೆ.

## ಹೊಸ ಒಡಂಬಡಿಕೆಯಲ್ಲಿ ಉಳಿದಿರುವ ಇತರೆ ಭಾಗದಿಂದ ನಾವುಗಳು ಏನನ್ನು ಕಲಿಯಬಹುದು?

ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳ ಮೂಲಕವಾಗಿ ಯೇಸುವಿನ ಕುರಿತಾದ ಪ್ರಮುಖವಾದ ಮಾಹಿತಿಗಳನ್ನು ಕಲೆ ಹಾಕಬಹುದಾಗಿದೆ. ಅದಾಗ್ಯೂ ಹೊಸ ಒಡಂಬಡಿಕೆಯಲ್ಲಿ ಉಳಿದಿರುವ ಇತರೆ ಭಾಗಗಳಿಂದಲೂ ಯೇಸುವಿನ ಕುರಿತ ಮಾಹಿತಿಗಳನ್ನು ಪಡೆಯಬಹುದಾಗಿದೆ.

ಪೌಲನ ಪತ್ರಿಕೆಗಳು ಬಹು ಪ್ರಮುಖವಾಗಿವೆ. ಪೌಲನು ಬರೆದಿರುವ ಪತ್ರಿಕೆಗಳು ಹೊಸ ಒಡಂಬಡಿಕೆಯಲ್ಲಿರುತ್ತವೆ. ಕ್ರಿ.ಶ. 49 ರಿಂದ 65 ಅಂತರದಲ್ಲಿ ಈ ಪತ್ರಿಕೆಗಳನ್ನು ಬರೆಯಲಾಗಿದೆ. ಸುವಾರ್ತೆಗಳನ್ನು ಬರೆದ ಕಾಲಮಾನಗಳ ಪ್ರಕಾರ (ಸಾಮಾನ್ಯ ಕ್ರಿ.ಶ. 50-100), ಪ್ರಾಯಶಃ ಪೌಲನ ಪತ್ರಿಕೆಗಳು ಅವುಗಳಿಗಿಂತ ಮೊದಲೇ ಬರೆಯಲ್ಪಟ್ಟವು ಎನ್ನಬಹುದಾಗಿದೆ. ಹೊಸ ಒಡಂಬಡಿಕೆಯನ್ನು ಕಾಲಾನುಕ್ರಮವಾಗಿ ಬರೆಯದೆ ತರ್ಕಶಾಸ್ತ್ರಕ್ಕನುಗುಣವಾದ ಕ್ರಮದಲ್ಲಿ ಬರೆಯಲಾಗಿದೆ. ಸುವಾರ್ತೆಗಳನ್ನು ಮೊದಲು ಬರೆಯಲಾಗಿದೆ ಎಂದು ತಿಳಿದು, ಸುವಾರ್ತೆಗಳನ್ನು ಸತ್ಯವೇದದಲ್ಲಿ ಮೊದಲನೆಯ ಕ್ರಮಾಂಕದಲ್ಲಿರಿಸದೆ, ಅವುಗಳಲ್ಲಿರುವ

ಚರಿತ್ರೆಯು ಇತರೆ ಭಾಗಗಳಿಗೆ ಮೂಲವಾಗಿರುವದರಿಂದ, ಅವುಗಳನ್ನು ಹೊಸ ಒಡಂಬಡಿಕೆಯಲ್ಲಿ ಮೊದಲ ಕ್ರಮಾಂಕದಲ್ಲಿ ಇರಿಸಲಾಗಿದೆ.

ಪೌಲನ ಪತ್ರಿಕೆಗಳು ಬೋಧನೆ ಹಾಗೂ ಕ್ರಮಪಡಿಸುವ ದಾಖಲಾತಿಗಳಾದ್ದರಿಂದ, ಪೌಲನು ಯೇಸುವಿನ *ಚರಿತ್ರೆಯನ್ನು* ವಿಸ್ತಾರಮಾಡಿರುವದಿಲ್ಲ. ಆತನ ಓದುಗರು ಈಗಾಗಲೇ ಯೇಸುವಿನ ವಿಚಾರವನ್ನು ತಿಳಿದಿದ್ದರು ಎಂದು ನಂಬಿ, ಯೇಸುವಿನ ಜೀವಿತ ಕಾಲದಲ್ಲಿ ಅಂದರೆ 20 ರಿಂದ 30 ವರ್ಷಗಳ ಅಂತರದಲ್ಲಿ, ಯೇಸುವನ್ನು ನಂಬಿದ್ದಂಥ ಕ್ರೈಸ್ತರಿಗಾಗಿ ತನ್ನ ಪತ್ರಿಕೆಯನ್ನು ಬರೆದಿರುವನು.

ಪೌಲನು ತನ್ನ ಪತ್ರಿಕೆಗಳಲ್ಲಿ ಯೇಸುವಿನ ಕುರಿತಾದ ಘಟನಾವಳಿಗಳನ್ನು ಬರೆಯದೆ ಇರುವದರಿಂದ, ಅವನು ಯೇಸುವಿನ ಕುರಿತು ಏನನ್ನೂ ಅರಿಯದವನಾಗಿದ್ದನು ಎಂಬ ತಾತ್ಪರ್ಯವಲ್ಲ. ಉದಾಹರಣೆ ಪೌಲನು, ಯೇಸು ಅಬ್ರಹಾಮನ ಸಂತತಿಯವನು (ಗಲಾತ್ಯ 3:16) - ಆತನು ದಾವೀದನ ಮಗನು (ರೋಮಾಪುರ 1:3), ಆತನು ಸ್ತ್ರೀಯಲ್ಲಿ ಹುಟ್ಟಿದವನು ಎಂದು ಬರೆದಿರುವನು. ಯೇಸು ಯೆಹೂದ್ಯರ ನಿಯಮಗಳಿದ್ದ ಕಾಲದಲ್ಲಿ ವಾಸಿಸಿದ್ದನು (ಗಲಾತ್ಯ 4:4). ಆತನು ಎಲ್ಲರನ್ನು ಅಂಗೀಕರಿಸಿದನು (ರೋಮಾಪುರ 15:5-7). ಆತನು ದೀನನಾಗಿ, ಇತರರ ಸೇವೆಗಾಗಿ ಬದುಕಿದನು (ಫಿಲಿಪ್ಪಿ 2:7, 8) ಎಂದು ಬರೆದನು. ಯಾಕೋಬನೆಂಬ ಸಹೋದರನನ್ನು ಯೇಸು ಹೊಂದಿದ್ದನು, ಮತ್ತು ಇತರೆ ಸಹೋದರರನ್ನು ಹೊಂದಿದ್ದನು ಎಂದು ಪೌಲನು ದಾಖಲಿಸಿರುವನು (ಗಲಾತ್ಯ 1:19; 1 ಕೊರಿಂಥ 9:5). ಯೇಸು ನಿಂದನೆಗೆ ಹೇಗೆ ಒಳಗಾದನು (ರೋಮಾಪುರ 15:3) ಆತನು ಹಿಡಿಯಲ್ಪಟ್ಟ ರಾತ್ರಿಯಲ್ಲಿ ಕಡೇ ಭೋಜನವನ್ನು ನೀಡಿದನು (1 ಕೊರಿಂಥ 11:2, 23-25). ಯೇಸು ಪಿಲಾತನ ಮುಂದೆ ಹಾಜರಾದನು (1 ತಿಮೊಥೆ 6:13); ಯುದಾಯದ ಯೆಹೂದ್ಯರು ಆತನ ಮರಣದಲ್ಲಿ ಹಾಜಾರಾಗಿದ್ದರು (1 ಥೆಸಲೋನಿಕ 2:14, 15); ಆತನು ಹೂಣಲ್ಪಟ್ಟರೂ ಮೂರನೆಯ ದಿನ ಎದ್ದು ಬಂದನು, ಪುನರುತ್ಥಾನದ ನಂತರ ಅನೇಕರಿಗೆ ಕಾಣಿಸಿಕೊಂಡನು (1 ಕೊರಿಂಥ 15:4-8). ಘಟನಾವಳಿಗಳಿಗೆ ಅನುಗುಣವಾಗಿ ಇವುಗಳನ್ನು ದಾಖಲಾಗಿಸಲಾಗಿದೆಯೇ ಹೊರತು - ಯೇಸುವಿನ ಕಥೆಯನ್ನು ಪೌಲನು ಒತ್ತಾಯ ಪೂರ್ವಕವಾಗಿ ಹೇಳಿರುವದಿಲ್ಲ.

ಅವನ ಬರವಣಿಗೆಗಿಂತಲೂ, ಅವನು ಹೆಚ್ಚಾಗಿ ಅರಿತ್ತಿದ್ದನು ಎಂಬ ಸತ್ಯವನ್ನು ಇಲ್ಲಿ ಗ್ರಹಿಸಬಹುದಾಗಿದೆ. ಅದನ್ನು ಹೆಚ್ಚಾಗಿ ಹೇಳುವ ಅಗತ್ಯವು ಅವನಿಗಿರಲಿಲ್ಲ. ಈ ಎಲ್ಲಾ ವಿವರಣೆಗಳನ್ನು ಸುವಾರ್ತೆಗಳಿಂದ ದೃಢೀಕರಿಸಬಹುದಾಗಿದೆ. ಅದರಲ್ಲಿ ಯಾವುದೇ ಹೆಗ್ಗಳಿಕೆಯಿಲ್ಲ. ಯೇಸುವಿನ ಜೀವನ ಚರಿತ್ರೆಯ ಕುರಿತಾದ ತಿಳುವಳಿಕೆಯ ಕುರಿತಾಗಿ ಪೌಲನು ಸಹಜವಾಗಿ ತಿಳಿಸಿರುವನು. ಕಡೇಯ ಭೋಜನದಲ್ಲಿ ಯೇಸುವಿನ ವಿಚಾರವನ್ನು ಈಗಾಗಲೇ ತಿಳಿಸಿರುವನು (1 ಕೊರಿಂಥ 11:23-25; ಮತ್ತಾಯ 26:26-29). ವಿವಾಹ ಹಾಗೂ ವಿಚ್ಛೇದನ ವಿಚಾರದಲ್ಲಿರುವ ಯೇಸುವಿನ ಆಲೋಚನೆಯನ್ನು ಪೌಲನು ಬರೆದಿರುವನು (1 ಕೊರಿಂಥ 7:10, ನೋಡಿರಿ 11; ಮಾರ್ಕ 10:2-12). ಕೂಲಿಯವನು ಸಂಬಳಕ್ಕೆ ಯೋಗ್ಯನು (1 ಕೊರಿಂಥ 9:14; ಮತ್ತಾಯ 10:10) ಯೇಸುವಿನ ಆಲೋಚನೆಯಂತೆ ಸಕಲ ಆಹಾರವೂ ಪರಿಶುದ್ಧವೇ (1 ಕೊರಿಂಥ 10:27; ಮಾರ್ಕ 7:18-20). ಸುಖ ನೀಡುವ ಬಗ್ಗೆ, ಯೇಸುವಿನ ಆಲೋಚನೆಯನ್ನೇ ನೀಡಿರುವನು (ರೋಮಾಪುರ 13:7; ಲೂಕ 20:25); "ಕಳ್ಳನು ಬರುವಂತೆ" ಎಂದು ಹೇಳಿ ಯೇಸುವಿನ ಬರೋಣದ ಕುರಿತು ಬರೆದನು (1 ಥೆಸಲೋನಿಕ 5:2-5; ಮತ್ತಾಯ 24:36-44); ಯೇಸುವಿನ ಪರ್ವತ ಪ್ರಸಂಗದ ಅನೇಕ ಆಲೋಚನೆಗ ಳನ್ನು ಪುನರಾವರ್ತಿಸಿರುವನು (ರೋಮಾಪುರ 12:9-13:10; ನೋಡಿ ಮತ್ತಾಯ 5:43-7:12).

ಪೌಲನಿಗೆ, ಯೇಸುವಿನ ಕುರಿತು ಹೆಚ್ಚು ತಿಳುವಳಿಕೆಯಿರಲಿಲ್ಲ ಎಂದು ಯಾರಾದರೂ ಹೇಳು ವದಾದರೆ, ಅಂಥವನಿಗೆ ಪೌಲನ ಬಗ್ಗೆ ಹೆಚ್ಚು ತಿಳಿದಿರಲಾರನು ಎಂದು ಹೇಳಬಹುದು!

ಮೇಲ್ಕಾಣಿಸಿದ ವಾಕ್ಯಗಳ ಆಧಾರದಲ್ಲಿ, ಪೌಲನ ತಿಳುವಳಿಕೆಯು ಗಮನಾರ್ಹವಾಗಿದೆ ಎಂದು ತಿಳಿದು ಬರುತ್ತದೆ. ಅವನು ಹೇಳಿರುವಂಥ ವಿಚಾರಗಳು ಈಗಾಗಲೇ ಸುವಾರ್ತೆಗಳಲ್ಲಿ ದಾಖಲಾಗಿರುವದರಿಂದ, ಅವುಗಳ ಕುರಿತು ಆಗಿನ ಕ್ರೈಸ್ತರು ತಿಳಿದವರಾಗಿದ್ದರು ಎಂಬುದು ದೃಢಪಟ್ಟಿರುತ್ತದೆ.

ಕೆಲವು ಸಾರಿ, "ಪೌಲನು ಹೇಗೆ ಯೇಸುವಿನ ಕುರಿತು ಅರಿತನು?" ಎಂಬುದು ಕೆಲವರಿಗೆ ತರ್ಕದ ವಿಚಾರವಾಗಿರುತ್ತದೆ. ಯಾಕಂದರೆ ಅವನು ಹನ್ನೆರಡು ಜನ ಅಪೊಸ್ತಲರಂತೆ ಯೇಸುವಿನ ಸಂಗಡ ಇದ್ದವನಲ್ಲ. (ಯೇಸು ಜೀವಿಸಿದ್ದ ಕಾಲದಲ್ಲೇ ಪೌಲನು ಜೀವಿಸಿದ್ದರೂ ಅವರು ಸಂಪರ್ಕದಲ್ಲಿರಲಿಲ್ಲ.) ಪೌಲನು ಮೂರು ವಿಧವಾದ ಮೂಲಗಳಿಂದ ಪಡೆದಿರುವರು. (1) ಗಲಾತ್ಯ 1:18, 19 ರಂತೆ ಯೇಸುವನ್ನು ಕಣ್ಣಾರೆ ಕಂಡ ಪೇತ್ರ ಹಾಗೂ ಯೇಸುವಿನ ಸಹೋದರನಾದ ಯಾಕೋಬನನ್ನು ಪೌಲನು ಸಂದಿಸಿದ್ದನು ಆ ಸಮಯದಲ್ಲಿ ಯೇಸುವಿನ ಚರ್ಚೆಯೇ ಪ್ರಮುಖವಾಗಿರಬಹುದು. (2) ಸುವಾರ್ತೆಗಳು ಬರೆಯುವ ಮೊದಲು, ಯೇಸುವಿನ ವಿಚಾರವನ್ನು ಬಾಯಿ ಮಾತಿನಿಂದ ಪ್ರಚಾರ ಮಾಡಿದ್ದರು (ಬಾಯಿಂದ ಹೇಳುವ ಸಂಪ್ರದಾಯ) ಯೇಸುವನ್ನು ಅಂಗೀಕರಿಸಿದ ಪ್ರತಿ ವಿಶ್ವಾಸಿಯು ಈ ಸಂಪ್ರದಾಯ ಹೊಂದಿದ್ದರು. ಪೌಲನು ಕೂಡ ಇದರ ಹೊರತಾಗಿರಲಿಲ್ಲ. (3) ಪೌಲನು ಮನುಷ್ಯರಿಂದ ಹೊಂದದೆ ದೈವೀಕ ಪ್ರಕಟನೆಯಿಂದ ಸುವಾರ್ತೆಯನ್ನುಪಡೆದನು (ಗಲಾತ್ಯ 1:11, 12, 16; 1 ಕೊರಿಂಥ 11:23; 15:3). ಅಂದರೆ ಎಲ್ಲವನ್ನು ಇದೇ ಮೂಲದಿಂದ ಹೊಂದಿದನು ಎಂಬ ಅರ್ಥವಲ್ಲ. ಹಾಗೂ ಎರಡು ಮೂಲಗಳನ್ನು ಅವನು ನಿರಾಕರಿಸಿರುವದಿಲ್ಲ. ಆದರೆ ಅವನು ಹೊಂದಿದ ಪ್ರಮುಖ ಅಂಶಗಳನ್ನು ದೇವರಿಂದ ನೇರವಾಗಿ ಪಡೆದಿದ್ದನು. ಅವನು ದೈವೀಕವಾಗಿ ಪಡೆದಿದ್ದರೂ, ಇತರರಿಂದ ಕಲಿಯುವ ಮನೋಭಾವದವನಾಗಿದ್ದನು.

ಪೌಲನ ಬರವಣಿಗೆಗಳು, ಸುವಾರ್ತಾ ಬರವಣಿಗೆಗಳಿಗಿಂತ ಪುರಾತನವಾಗಿದ್ದರಿಂದ, ಇದು ಸಹ ಹೊಸ ಒಡಂಬಡಿಕೆಯ, ಪ್ರಮುಖ ಮೂಲವಾಗಿರುತ್ತದೆ. ಪೇತ್ರ, ಯೋಹಾನ, ಹಾಗೂ ಯಾಕೋಬರು ಯೇಸುವಿನ ಸಂಗಡ ನೇರ ಸಂಪರ್ಕದಲ್ಲಿದ್ದರು. ಲೂಕನು ಬರೆದ ಅಪೊಸ್ತಲರ ಕೃತ್ಯಗಳಲ್ಲಿ ಯೇಸುವಿನ ಕುರಿತಾದ ಕ್ರಾಂತಿಯ ಮೂವತ್ತು ವರ್ಷಗಳ ಚರಿತ್ರೆ ಸಭೆಯ ಕುರಿತಾಗಿದೆ. (ಅದು ಸಹ ಇತಿಹಾಸದ ದಾಖಲಾಗಿದೆ.) ಇವುಗಳು ನಜ ರೇತಿನ ಯೇಸುವಿನ ಸತ್ಯಾಂಶವನ್ನು ಪ್ರಕಟ ಪಡಿಸಿರುವದರಿಂದ, ಇವುಗಳು ವಿಶೇಷ ದಾಖಲೆಗಳಾಗಿವೆ.

## ಅಂತಿಮ ಮಾತುಗಳು

ನಮಗೆ ಐತಿಹಾಸಿಕ ದಾಖಲೆಗಳು ಲಭ್ಯವಾಗಿವೆ: ಹೊಸ ಒಡಂಬಡಿಕೆಯಲ್ಲಿನ ನಾಲ್ಕು ಸುವಾರ್ತೆಗಳೂ ಮಾಹಿತಿಯ ಪ್ರಮುಖ ಮೂಲವಾಗಿವೆ ಅವುಗಳನ್ನು ನಂಬದೆ ಹೋದರೆ, ಯೇಸುವಿನ ಬಗ್ಗ ಅರಿಯುವದು ಕಷ್ಟಕರವಾಗುತ್ತದೆ. ಅವುಗಳು ಯೋಗ್ಯ ವಾಗಿರುವದರಿಂದ, ಯೇಸುವಿನ ಬಗ್ಗೆ ಅಧಿಕವಾಗಿ ಅರಿಯಬಹುದಾಗಿದೆ. ಇತರೆ ಮೂಲಗಳು ಸಹ ಪ್ರಯೋಜನಕಾರಿಯಾಗಿವೆ. ಏಕೆಂದರೆ ಅವುಗಳು ಸುವಾರ್ತೆಯ ಮೂಲಗಳನ್ನು ಹೊಂದಿರುತ್ತೇವೆ. ಹೊಸ ಒಡಂಬಡಿಕೆಯಲ್ಲಿ ಉಳಿದಿರುವ ಭಾಗಗಳು ಯೇಸುವಿನ ಕುರಿತಾಗಿ ಅಧಿಕ ಮಾಹಿತಿಯನ್ನು ನೀಡದೆ ಇದ್ದರೂ, ಸುವಾರ್ತೆಗಳು ಬರೆಯಲ್ಪಡುವ ಮೊದಲು, ಬರೆದ ಬರವಣಿಗೆಗಾರರು, ನಂಬಿದಂತೆ ಭೋಧಿಸಿದರು ಎಂದು ತಿಳಿದು ಬರುತ್ತದೆ.

ಹೊಸ ಒಡಂಬಡಿಕೆಯಲ್ಲಿ ನಾಲ್ಕು ದಾಖಲೆಗಳನ್ನು ನೀಡಲಾಗಿದೆ. ಅದು ದೃಢಪಡಿಸುವ ದಾಖಲೆಗಳಾಗಿವೆ. ನನ್ನ ಮಾತುಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡದೆ, ನೀವೆ ಸ್ವಂತವಾಗಿ ಸುವಾರ್ತೆಗಳನ್ನು ಅಭ್ಯಸಿಸಿರಿ!

**ಟಿಪ್ಪಣಿಗಳು**

1Graham N. Stanton, *The Gospels and Jesus* (New York: Oxford University Press, 1989), 60-61. [2]Further information is given in F. F. Bruce, *The New Testament Documents: Are They Reliable?* 6th ed. (Grand Rapids, Mich.: Wm. B. Eerdmans Publishing Co., 1981) and Paul Barnett, *Is the New Testament Reliable?* rev. ed. (Downer's Grove, Ill.: InterVarsity, 2003). [3]British New Testament scholar J. D. G. Dunn ಅವರು ಯೇಸುವಿನ ಕುರಿತಾದ ಸಂದೇಶವು ಮೊದಲು ಮೌಖಿಕವಾಗಿತ್ತೆಂದು ವಾದಿಸಿದರು ಬರಹರೂಪದಲ್ಲಿ ದಾಖಲೆಯಿಲ್ಲದಿರುವದರಿಂದ ಯೇಸುವಿನ ಕುರಿತ ವಿಷಯಗಳು ನಂಬುವದಕ್ಕೆ ಕಡಿಮೆ ನಂಬಲರ್ಹವಾದುದ್ದೆಂದು ಊಹಿಸಬಾರದೆಂದರು ಸಂಭವಿಸಿದ ಘಟನೆಗಳಿಗೂ ಅವು ದಾಖಲಾದ ಸಮಯಕ್ಕು ಮಧ್ಯ ಇರುವ ಅಂತರವನ್ನು ತೆಗೆದುಹಾಕುತ್ತದೆ ಎಕೆಂದರೆ ಮೌಶಿಕ ಸಂಪ್ರದಾಯದ ಮೇಲೆ ಬರಹವು ಆಧಾರಗೊಂಡಿದೆ ಎಂದು ಗುರುತಿಸಬೇಕು. J. D. G. Dunn, *A New Perspective on Jesus: What the Quest for the Historical Jesus Missed* (Grand Rapids, Mich.: Baker Academic, 2005), 35-56, 79-125. [4]ಪೌಲನ ಬರಹಗಳನ್ನು ಹಲವು ಪಂಡಿತರು 50ನೇ ಇಸವಿಯಲ್ಲಿ ಬರೆದವುಗಳೆಂದು ಹೇಳುತ್ತಾರೆ. [5]ಸುವಾರ್ತೆಗಳ ನಂಬಲರ್ಹತೆಯ ಬಗ್ಗೆ ಹೆಚ್ಚಾಗಿ, Gary R. Habermas, "Why I Believe the New Testament Is Historically Reliable," in N. L. Geisler and P. K. Hoffman, eds., *Why I Am a Christian: Leading Thinkers Explain Why They Believe*, rev. and exp. ed. (Grand Rapids, Mich.: Baker Books, 2006), 161-74. [6]Josephus, *Antiquities* 18:1.